ತುಂಬಾ ಪಾಶ್ ಆದ ಅಪಾರ್ಟ್‌ಮೆಂಟುಗಳಿರುವ ಕಾಲೋನಿ ಅದು. ಬಹುಪಾಲು ಹೊಸ ಹೊಸ ಬಿಲ್ಡಿಂಗುಗಳೇ ಕಾಣಿಸುತ್ತಿದ್ದವು. ಇವರು ವಾಸಿಸುತ್ತಿದ್ದ ಅಪಾರ್ಟ್‌ಮೆಂಟ್ ಮೊದಲೇ ಬಂತು.

'ಬನ್ನಿ. ಲಿಫ್ಟ್ ಈ ಕಡೆ ಇದೆ' ಅಂದಳಾಕೆ ಕಾರಿಳಿದು ದಾರಿ ತೋರಿಸುತ್ತ.

ಚಿನ್ನು ನಮ್ಮ ಹಿಂದೇ ಇಳಿದು ಕೀಬೋರ್ಡ್ ಹಿಡಿದುಕೊಂಡು ಮಾತಾಡದೆ ಬಂದು ನಿಂತಿದ್ದ.

ಲಿಫ್ಟ್ ಕದಲಿತು. ನಂಬರುಗಳನ್ನು ನೋಡತೊಡಗಿದೆ.

ಫಸ್ಟ್... ಸೆಕೆಂಡ್... ಥರ್ಡ್... ಫೋರ್ತ್...

ಮೇಲೆ ಹೋದ ಮೇಲೆ ಮನೆ ಡೋರ್ ಮೇಲೆ ನಂಬರ್ ಇತ್ತು. ಫೋರ್ ನಾಟ್...

ಆಕೆ ಬೆಲ್ಲು ಹೊಡೆದ ಸ್ವಲ್ಪ ಹೊತ್ತಿನ ನಂತರ ಹದಿನಾರು ಹದಿನೇಳು ವಯಸಿನ ಒಬ್ಬ ಬಡಕಲು ಹುಡುಗಿ ಬಂದು ಬಾಗಿಲು ತೆಗೆದಳು. ಅವಳು ಪಂಜಾಬಿ ಡ್ರೆಸ್‌ನಲ್ಲಿದ್ದಳು. ಕೆಲಸದವಳಿರಬೇಕು. ನನ್ನ ನೋಡಿ ಆಶ್ಚರ್ಯಚಕಿತಳಾದಂತೆ ಕಂಡಳು.

'ಗೆಸ್ಟ್ ಬಂದಿದಾರೆ. ಅನ್ನಕ್ಕಿಡು. ಎಗ್ಸ್ ಇದಾವಲ್ಲ?'

'ಇದಾವಮ್ಮ.'

'ಮೊದಲು ಮಗೂಗೆ ಊಟ ಮಾಡಿಸಿಬಿಡು. ಅವನಿಗೆ ಚೇಂಜ್ ಮಾಡಿಕೊಳ್ಳಲು ಬೇರೆ ಡ್ರೆಸ್ ಕೊಡು' ಅಂದು ನನ್ನನ್ನು ಹಾಲಿಗೆ ಕರೆದೊಯ್ದು ಸೋಫಾ ಮೇಲೆ ಕೂರಿಸಿದಳು.

ಮತ್ತೊಂದು ಪಕ್ಕದಲ್ಲಿ ತಾನೂ ಕೂರುತ್ತ 'ಚಿನ್ನೂ' ಅಂತ ಕರೆದಳು.

ಚಿನ್ನು ಓಗೊಡಲಿಲ್ಲ.

'ಚಿನ್ನು ಇಲ್ಲಿ ಬಾರೋ' ಅಂತ ಕೂಗಿದಳು ಇಂಗ್ಲೀಷಿನಲ್ಲಿ.

ಚಿನ್ನು ಬಂದು ನಿಂತುಕೊಂಡ.

ಆಕೆ ಅವನತ್ತ ತೀಕ್ಷ್ಣವಾಗಿ ನೋಡಿ ಅಷ್ಟರೊಳಗೆ ಮೆತ್ತಗಾಗಿ ಕೈಹಿಡಿದು ಪಕ್ಕದಲ್ಲಿ ಕೂರಿಸಿಕೊಳ್ಳುತ್ತ ರಮಿಸುವ ಧಾಟಿಯಲ್ಲಿ ಮಾತಾಡತೊಡಗಿದಳು.

'ಚಿನ್ನೂ ನೋಡೋ ಕಂದಾ... ಅಂಕಲ್ ಬಂದಿದಾರೆ. ಪಾಪ ಅವರು ನಿನಗೋಸ್ಕರನೇ ಟೈಮೆಲ್ಲ ಸ್ಪೇರ್ ಮಾಡಿದಾರೆ. ಅವರೊಂದಿಗೆ ಸ್ವಲ್ಪ ಹೊತ್ತು ಮಾತಾಡಿ – ನಿನ್ನ ಬಗ್ಗೇನೇ – ನಿನ್ನ ಮ್ಯೂಜಿಕ್ ಬಗ್ಗೆ – ಅವರು ಊಟ ಮಾಡಿದ ಮೇಲೆ ಕಳಿಸಿಕೊಡೋಣ. ಸರೀನಾ. ಅಷ್ಟರಲ್ಲಿ ನೀನು ಊಟ ಮಾಡಿ ಹಾಲು ಕುಡಿ. ನಿನ್ನ ರೂಮೊಳಗೆ ಹೋಗಿ ಮಲಕ್ಕೋ. ಬೇಕಾದರೆ ಕಂಪ್ಯೂಟರ್‌ನಲ್ಲಿ ಗೇಮ್ಸ್ ಆಡಿಕೊ, ಏನಮ್ಮಾ. ಅವರು ಹೋಗ್ತಿದ್ದಂತೆ ನಾನು ಬಂದು ನಿನ್ನ ಪಕ್ಕ ಮಲಕ್ಕೋತೀನಿ. ಸರೀನಾ? ನನ್ನ ಬಂಗಾರ ಅಲ್ಲ...'

ಚಿನ್ನು ಮಾತಾಡಲಿಲ್ಲ.

'ಹೇಳು ಕಂದಾ. ಅಮ್ಮ ಅಲ್ಲಾ ನಾನು. ಅಮ್ಮನ್ನ ಅಳಿಸ್ತಾರಾ ಯಾರಾದರೂ. ಹೀಗೆ ನಾನೆಂದಾದರೂ ನಿನ್ನ ರಿಕ್ವೆಸ್ಟ್ ಮಾಡಿದೀನಾ? ನೀನೇ ಹೇಳು? ಇದೊಂದು ಸಲ ರಾಜಾ...'

'ಸರಿ.'

'ನನ್ನ ಡಿಸ್ಟರ್ಬ್ ಮಾಡಲ್ಲ ತಾನೆ?'

'ಹ್ಞೂಂ.'

'ಗುಡ್' ಸಂತೋಷದಿಂದ ಉಸಿರೆಳೆದುಕೊಂಡಳಾಕೆ.

ಚಿನ್ನು ಹೊರಟುಹೋದ.